KAVP010055692024

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯಪುರ</u>**

**<u>ಎಸ್.ಸಿ. ನಂ.140/2024</u>**

**<u>ಫಿರ್ಯಾದಿದಾರರು:</u>** ಕರ್ನಾಟಕ ಸರ್ಕಾರದ ಪರವಾಗಿ
ಪ್ರತಿನಿಧಿಸುವರು ತಿಕೋಟಾ ಪೊಲೀಸ್ ಠಾಣೆ.

**ವಿರುದ್ಧ**

**<u>ಆರೋಪಿತರು:</u>** ಸಚೀನ ಹಾಗೂ ಇತರರು

**<u>ದೋಷಾರೋಪಣೆ</u>**

ನಾನು **ಶಿವಾಜಿ ಅನಂತ ನಾಲವಾಡೆ**, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ ಈ ಮೂಲಕ ನಿಮ್ಮ ವಿರುದ್ಧ ಈ ಕೆಳಕಾಣಿಸಿದ ಆಪಾದನೆಗಳನ್ನು ರೂಪಿಸಿರುತ್ತೇನೆ.

**<u>ಆರೋಪಿತರು</u>**:

1. ಸಚೀನ ತಂ ಸುರೇಶ ಹೊಸಮನಿ,
ವಃ 26 ವರ್ಷ, ಉಃಕೂಲಿ ಕೆಲಸ.

2. ಬಾಸ್ಕರ ತಂ ದರಗಪ್ಪ ಹೊಸಮನಿ,
ವಃ 45 ವರ್ಷ, ಉಃ ಒಕ್ಕಲುತನ.

3. ವಿಜಯ ತಂ ರಾಜೇಂದ್ರ ಅಡಹಳ್ಳಿ,
ವಃ 27 ವರ್ಷ, ಉಃ ಶಿಕ್ಷಣ.

4. ಕಾರ್ತಿಕ ತಂ ರಮೇಶ ಜವಳಿ,
ವಃ 25 ವರ್ಷ, ಉಃ ಶಿಕ್ಷಣ.

5. ಸುರೇಶ ತಂ ದರಗಪ್ಪ ಹೊಸಮನಿ,
ವಃ 62 ವರ್ಷ, ಉಃ ಒಕ್ಕಲುತನ

6. ಸಿದ್ದಣ್ಣ ತಂ ದರಗಪ್ಪ ಹೊಸಮನಿ,
ವಃ 41 ವರ್ಷ, ಉಃ ಡ್ರೈವರ

7. ಸಂದೀಪ ತಂ ಸುರೇಶ ಹೊಸಮನಿ,
ವಃ 34 ವರ್ಷ, ಉಃ ಕೂಲಿ ಕೆಲಸ

8. ಅಮೀತ ತಂ ಸುರೇಶ ಹೊಸಮನಿ,
ವಃ 22 ವರ್ಷ, ಉಃ ಡ್ರೈವರ

9. ಸಂತೋಷ ತಂ ಸುರೇಶ ಹೊಸಮನಿ,
ವಃ 25 ವರ್ಷ, ಉಃ ಡ್ರೈವರ

10. ದೀರಜ ತಂ ಬಾಳು ಹೊಸಮನಿ,
ವಃ 26 ವರ್ಷ, ಡ್ರೈವರ

11. ಅಜಯ ತಂ ರಾಜೇಂದ್ರ ಅಡಹಳ್ಳಿ,
ವಃ 29 ವರ್ಷ, ಉಃ ಶಿಕ್ಷಣ.

12. ರಾಜೇಂದ್ರ ಗುರುಸಿದ್ದಪ್ಪ ಅಡಹಳ್ಳಿ,
ವಃ 58 ವರ್ಷ, ಉಃ ಕೂಲಿ ಕೆಲಸ

13. ಸುಧೀಪ ತಂ ಬಾಳು ಹೊಸಮನಿ,
ವಃ 19 ವರ್ಷ, ಉಃ ಶಿಕ್ಷಣ

14. ಬಾಳು ತಂ ಗೋವಿಂದ ಹೊಸಮನಿ,
ವಃ 56 ವರ್ಷ, ಉಃ ಕೂಲಿ ಕೆಲಸ

15. ಭೀಮರಾವ ತಂ ಯಲ್ಲಪ್ಪ ಹೊಸಮನಿ @ ಜವನರ,
ವಃ 47 ವರ್ಷ. ಉಃ ಕೂಲಿ ಕೆಲಸ

ಎಲ್ಲರೂ ಸಾಃ ಕನಮಡಿ

ಮೊದಲನೆಯದಾಗಿ, ಆರೋಪಿತರು ಮತ್ತು ಫಿರ್ಯಾದಿದಾರರು ಒಂದೆ ಓಣಿಯವರು ಇದ್ದು ಸದರಿಯವರ ನಡುವೆ ಕಳೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಫಿರ್ಯಾದಿ, ಫಿರ್ಯಾದಿ ಮನೆಯವರ ಹಾಗೂ ಆರೋಪಿತರ ನಡುವೆ ಜಗಳವಾಗಿ ವೈಮನಸ್ಸಾಗಿದ್ದು ಅಲ್ಲದೇ ಕಳೆದ 6 ತಿಂಗಳ ಹಿಂದೆ ಅವರವರ ನಡುವೆ ಜಗಳ ಆಗಿದ್ದು ಈ ಬಗ್ಗೆ ಹಿರಿಯರ ಸಮ್ಮುಖದಲ್ಲಿ ನ್ಯಾಯ ಮಾಡಿಸಿದರೂ ಕೂಡಾ ಸದರಿ ಜಗಳ ಬಗೆಹರಿಯದೇ ಆರೋಪಿತರು ಫಿರ್ಯಾದಿ ಹಾಗೂ ಫಿರ್ಯಾದಿ ಮನೆಯವರಿಗೆ ಸಿಟ್ಟಾಗಿ ಜಗಳ ಮಾಡುತ್ತಾ ಒಂದಲ್ಲಾ ಒಂದು ದಿನಾ ಫಿರ್ಯಾದಿ ಅಣ್ಣ ತಮ್ಮಂದಿಯರಿಗೆ ಕೊಲೆ ಮಾಡುತ್ತೇವೆ ಅನ್ನುತ್ತಾ ತಿರುಗಾಡುತ್ತಿದ್ದು, ದಿನಾಂಕ 17-04-2022 ರಂದು 23-00 ಗಂಟೆ

ಸುಮಾರಿಗೆ ತಿಕೋಟಾ ಪೊಲೀಸ್ ಠಾಣೆಯ ಹದ್ದಿ ಪೈಕಿ ಕನಮಡಿ ಗ್ರಾಮದ ಹದ್ದಿಯ ಗಾಯಾಳು ಅಶೋಕ ಮಾಳಿ ಇವರ ಮನೆಯ ಮುಂದೆ ನೀವು ಆರೋಪಿತರ ಸಂಖ್ಯೆ 1 ರಿಂದ 15 ಫಿರ್ಯಾದಿ ಹಾಗೂ ಅವರ ಅಣ್ಣಂದಿರ ಕೊಲೆ ಮಾಡುವ ಏಕೊದ್ದೇಶದಿಂದ ಸಂಗಮತರಾಗಿ ಗೈರ ಕಾಯ್ದೆಶೀರ ಮಂಡಳಿ ರಚಿಸಿ ತನ್ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿರಿ.

ಎರಡನೆಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 1 ರಿಂದ 15 ನೇ ಆರೋಪಿತರು ವಿಧಿ ವಿರುದ್ದ ಕೂಟ ರಚಿಸಿ, ವಿಧಿವಿರುದ್ದ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ದೊಂಬಿ ಮಾಡಿದ್ದು, ತನ್ಮೂಲಕ ನೀವು ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿರಿ.

ಮೂರನೆಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 1 ರಿಂದ 15 ನೇ ಆರೋಪಿತರು ವಿಧಿ ವಿರುದ್ದ ಕೂಟ ರಚಿಸಿ, ವಿಧಿವಿರುದ್ದ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ಕೈಯಲ್ಲಿ ಮಾರಣಾಂತಿಕ ಆಯುಧವಾದ ತಲವಾರ, ಕಬ್ಬಿಣದ ರಾಡು, ಬಡಿಗೆ, ಹಾಗೂ ಕಲ್ಲು ಹಿಡಿದುಕೊಂಡು ದೊಂಬಿ ಮಾಡಿದ್ದು ತನ್ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿರಿ.

ನಾಲ್ಕನೆಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 1 ರಿಂದ 15 ನೇ ಆರೋಪಿತರು ವಿಧಿ ವಿರುದ್ಧ ಕೂಟ ರಚಿಸಿ, ವಿಧಿವಿರುದ್ಧ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ಫಿರ್ಯಾದಿ ಹಾಗೂ ಸಾಕ್ಷಿದಾರರ ಜೊತೆ ಜಗಳತೆಗೆದು 1 ನೇ ಆರೋಪಿ ಆದ ನೀನು ಚಾಸಾ-8 ನೇದ್ದವನಿಗೆ ತಲವಾರದಿಂದ ತಲೆಗೆ, ಕೈಗಳಿಗೆ ಹೊಡೆದು ಭಾರಿ ಗಾಯ ಪೆಟ್ಟು ಪಡಿಸಿದ್ದು, 2 ನೇ ಆರೋಪಿ ಆದ ನೀನು ಚಾಸಾ-9 ನೇದ್ದವರಿಗೆ ತಲವಾರದಿಂದ ಮುಖಕ್ಕೆ, ತಲೆಗೆ, ಬಲಮುಂಡಿಗೆ, ಬಲಗೈಗೆ ಹೊಡೆದು ಭಾರಿ ಗಾಯಪೆಟ್ಟು ಪಡಿಸಿ, ತನ್ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 326 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿರಿ.

ಐದನೆಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 1 ರಿಂದ 15 ನೇ ಆರೋಪಿತರು ವಿಧಿ ವಿರುದ್ಧ ಕೂಟ ರಚಿಸಿ, ವಿಧಿವಿರುದ್ಧ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ಫಿರ್ಯಾದಿ ಹಾಗೂ ಸಾಕ್ಷಿದಾರರ ಜೊತೆ ಜಗಳತೆಗೆದು 3 ನೇ ಆರೋಪಿ ಕಬ್ಬಿಣದ ರಾಡದಿಂದ, 4 ನೇ ಆರೋಪಿ ಕಬ್ಬಿಣದ ರಾಡಿನಿಂದ, 6 ನೇ ಆರೋಪಿ ಬಡಿಗೆಯಿಂದ ಹಾಗೂ 7 ನೇ ಆರೋಪಿ ಕಲ್ಲಿನಿಂದ ಫಿರ್ಯಾದಿ ಹಾಗೂ ಚಾಸಾ-10 ಮತ್ತು 11 ನೇದ್ದವರಿಗೆ ಹೊಡೆದು ಒಳಪೆಟ್ಟು ಪಡಿಸಿ ತನ್ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿರಿ.

ಆರನೆಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 1 ರಿಂದ 15 ನೇ ಆರೋಪಿತರು ವಿಧಿ ವಿರುದ್ಧ ಕೂಟ ರಚಿಸಿ, ವಿಧಿವಿರುದ್ಧ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ಫಿರ್ಯಾದಿ ಹಾಗೂ

ಸಾಕ್ಷಿದಾರರ ಜೊತೆ ಜಗಳತೆಗೆದು 5 ಮತ್ತು 8 ರಿಂದ 15 ನೇ ಆರೋಪಿತರು ನೀವು ಅವರಿಗೆ  ಕೈಯಿಂದ ಹೊಡೆಬಡೆ ಮಾಡಿ ತನ್ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿರಿ.

ಏಳನೆಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 1 ರಿಂದ 15 ನೇ ಆರೋಪಿತರು ವಿಧಿ ವಿರುದ್ಧ ಕೂಟ ರಚಿಸಿ, ವಿಧಿವಿರುದ್ಧ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ಫಿರ್ಯಾದಿ ಹಾಗೂ ಸಾಕ್ಷಿದಾರರ ಜೊತೆ ಜಗಳತೆಗೆದು 1 ನೇ ಆರೋಪಿ ಆದ ನೀನು ಚಾಸಾ-8 ನೇದ್ದವನಿಗೆ ತಲವಾರದಿಂದ ತಲೆಗೆ, ಕೈಗಳಿಗೆ ಹೊಡೆದಿದ್ದು ಹಾಗೂ 2 ನೇ ಆರೋಪಿ ಆದ ನೀನು ಚಾಸಾ-9 ನೇದ್ದವನಿಗೆ ತಲವಾರದಿಂದ ಮುಖಕ್ಕೆ, ತಲೆಗೆ, ಬಲಮುಂಡಿಗೆ, ಬಲಗೈಗೆ ಹೊಡೆದು ಭಾರಿ ಗಾಯಪೆಟ್ಟು ಪಡಿಸಿ ಅವರ ಕೊಲೆ ಮಾಡಲು ಪ್ರಯತ್ನಿಸಿ, ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 307 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿರಿ.

ಎಂಟನೆಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 1 ರಿಂದ 15 ನೇ ಆರೋಪಿತರು ವಿಧಿ ವಿರುದ್ಧ ಕೂಟ ರಚಿಸಿ, ವಿಧಿವಿರುದ್ಧ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ಫಿರ್ಯಾದಿ ಹಾಗೂ ಸಾಕ್ಷಿದಾರರ ಶಾಂತಿಭಂಗವನ್ನು ಮಾಡಲು ಉದ್ರೇಕಿಸುವದಕ್ಕಾಗಿ ಉದ್ದೇಶಪೂರ್ವಕವಾಗಿ ಅವರಿಗೆ "ಏ ರಂಡಿ ಮಕ್ಕಳರಾ ಹೊರಗ ಬನ್ನಿ" ಅಂತಾ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು ತನ್ಮೂಲಕ ನೀವು ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149

ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿರಿ.

ಕೊನೆಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 1 ರಿಂದ 15 ನೇ ಆರೋಪಿತರು ವಿಧಿ ವಿರುದ್ಧ ಕೂಟ ರಚಿಸಿ, ವಿಧಿವಿರುದ್ಧ ಕೂಟದ ಏಕೋದ್ದೇಶವನ್ನು ಈಡೇರಿಸುವಲ್ಲಿ ನೀವು ಫಿರ್ಯಾದಿ ಹಾಗೂ ಸಾಕ್ಷಿದಾರರಿಗೆ "ಈಗ ಉಳಿದಿರಿ ಮಕ್ಕಳರ್ಯಾ ಇನ್ನೊಮ್ಮೆ ಬಂದು ನಿಮ್ಮೆಲ್ಲರಿಗೂ ಖಲಾಸ ಮಾಡುತ್ತೇವೆ" ಅಂತಾ ಜೀವದ ಬೆದರಿಕೆ ಹಾಕಿದ್ದು, ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿರಿ.

ಈ ಮೇಲೆ ಹೇಳಿದ ಅಪರಾಧಕ್ಕಾಗಿ ಆರೋಪಿತರಾದ ನೀವು ನನ್ನಿಂದ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಶಿವಾಜಿ ಅನಂತ ನಾಲವಾಡೆ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ವಿಜಯಪುರ.**

ದಿನಾಂಕಃ 05.12.2024